
ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-8, ಸಂಚಿಕೆ-2 ತ್ರೈಮಾಸಿಕ ಏಪ್ರಿಲ್-ಜೂನ್ 2021 ಪುಟಗಳು-12



# ಕೋವಿಡ್-19 ಸಾಂಕ್ರಾಮಿಕದ ಬಗ್ಗೆ ಸಾರ್ವಜನಿಕರಿಗೆ ನೆರವು ನೀಡಲು ಬೆಸ್ಕಾಂ ಸಹಾಯವಾಣಿ 1912 ಸಜ್ಜು

ಬೆವಿಕಂ
BESCOM







# ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನುಡಿ



**ಆತ್ಮೀಯ ಸಹೋದ್ಯೋಗಿ ಬಂಧುಗಳೇ**

ನೂತನ ಪ್ಲವ ನಾಮ ಸಂವತ್ಸರವು ಆರಂಭವಾಗಿದ್ದು, ತಮಗೆಲ್ಲರಿಗೂ ಹೊಸವರ್ಷದ ಹಾರ್ದಿಕ ಶುಭಾಷಯಗಳು. ಜಗತ್ತನ್ನು ಕಾಡಿಸುತ್ತಿರುವ ಕೋವಿಡ್-19 ರ ಎರಡನೆಯ ಅಲೆಯು ಮಣುಕುಲಕ್ಕೆ ಸಂಕಷ್ಟ ತಂದೊಡ್ಡಿರುವ ಈ ಸಂದಿಗ್ಧ ಸಮಯದಲ್ಲಿ ನಾವು ಇನ್ನಷ್ಟು ಹೆಚ್ಚಿನ ಬದ್ಧತೆ ಮತ್ತು ಕ್ಷಮತೆಯಿಂದ ಕಾರ್ಯೋನ್ಮುಖವಾಗಲು ಪುನರ್ ಸಮರ್ಪಿಸಿಕೊಳ್ಳೋಣ.

ಕೋವಿಡ್-19 ವೈರಸ್ ಹಾವಳಿಯು ನಮ್ಮ ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಬದುಕನ್ನು ಪಲ್ಲಟಗೊಳಿಸಿದೆ. ಇದೀಗ ತಾನೇ ಕಾಲಿಟ್ಟು ತನ್ನ ಕಬಂಧ ಬಾಹುವನ್ನು ಎಲ್ಲೆಡೆ ಚಾಚಿರುವ ಕೋವಿಡ್‌ನ ಎರಡನೇ ಅಲೆಯ ನಾಗರೀಕ ಬದುಕನ್ನು ಅಲ್ಲೋಲ ಕಲ್ಲೋಲ ಮಾಡಿದೆ. ಮನೆಯಿಂದಲೇ ಕಾರ್ಯ ನಿರ್ವಹಿಸುವವರ ಸಂಖ್ಯೆ ಅಧಿಕವಾಗುತ್ತಿದೆ. ಆರೋಗ್ಯ ಸೇವೆಯು ಸಂಪೂರ್ಣ ಕ್ರಿಯಾಶೀಲವಾಗಿರುವ ಈ ಹೊತ್ತಿನಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಮಾಡುವ ಸವಾಲಿನ ಕೆಲಸವು ಬೆಸ್ಕಾಂಗೆ ಎದುರಾಗಿದೆ. ಬೆಸ್ಕಾಂನ ಅಧಿಕಾರಿ ಮತ್ತು ಸಿಬ್ಬಂದಿ ಸದಸ್ಯರುಗಳು ಸವಾಲಿನ ಕಾರ್ಯಗಳನ್ನು, ತುರ್ತು ಪರಿಸ್ಥಿತಿಯಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಕುಶಲತೆಯನ್ನು ಈ ಹಿಂದೆ ಪರಿಣಾಮಕಾರಿಯಾಗಿ ಎದುರಿಸಿ ಯಶಸ್ಸು ಕಂಡಿದ್ದಾರೆ. ಸಾರ್ವಜನಿಕರಿಂದ ಮುಕ್ತ ಶ್ಲಾಘನೆಯನ್ನು ಪಡೆದಿದ್ದಾರೆ. ಈ ರೀತಿ ಸಂಚಯನಗೊಂಡ ಅನುಭವದಿಂದ ಬೆಸ್ಕಾಂ ಅಧಿಕಾರಿ-ಸಿಬ್ಬಂದಿ ಸದಸ್ಯರು ಈಗ ಎದುರಾಗಿರುವ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುತ್ತಾರೆ ಎಂಬ ವಿಶ್ವಾಸ ನನಗಿದೆ. ಕೊರೋನಾ ಸಂಕಷ್ಟದ ಜೊತೆಯಲ್ಲಿಯೇ ಬೇಸಿಗೆಯ ಸಮಯವೂ ಸಹ ವಿಶೇಷ ಸವಾಲುಗಳನ್ನು ಒಡ್ಡುತ್ತದೆ. ಬೇಸಾಯ ಕ್ಷೇತ್ರದಲ್ಲೂ ವಿದ್ಯುತ್ ಬೇಡಿಕೆ ಅಧಿಕವಾಗಿರುತ್ತದೆ. ಜೊತೆಗೆ ಗೃಹಬಳಕೆಯ ವಿದ್ಯುತ್ ಬಳಕೆಯ ಪ್ರಮಾಣವೂ ಹೆಚ್ಚುತ್ತದೆ. ಅಲ್ಲದೆ ವಿದ್ಯುತ್ ಉತ್ಪಾದನೆಯಲ್ಲಿಯೂ ಸಹ ಸೂಕ್ಷ್ಮ ಏರುಪೇರುಗಳು ಈ ಕಾಲದಲ್ಲಿ ಸಹಜ.

ವಿದ್ಯುತ್ ಸರಬರಾಜಿನಲ್ಲಿ ಅಲ್ಪ ವ್ಯತ್ಯಯ ಕಂಡುಬಂದರೂ ಸಹ ಗ್ರಾಹಕರಿಂದ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಆದುದರಿಂದ ಇಂಥ ಸನ್ನಿವೇಶಗಳನ್ನು ಮೊದಲೇ ಗ್ರಹಿಸಿ, ಸಮರ್ಪಕ ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಬೆಸ್ಕಾಂ ಸಿಬ್ಬಂದಿ ಒಂದು ಸಮರ್ಥ ತಂಡವಾಗಿ ಕಾರ್ಯನಿರ್ವಹಿಸುವ ಪಣವನ್ನು ತೊಡುವುದು ಅಗತ್ಯವಾಗಿದೆ.

ಪ್ರಸ್ತುತ ಕೊರೋನಾ ಹಾವಳಿಯಿಂದ ಸಮಾಜ ಮಾತ್ರವಲ್ಲ ನಾವು ಕಾರ್ಯನಿರ್ವಹಿಸುವ ಪರಿಸರವೂ ಹೆಚ್ಚು ಸೂಕ್ಷ್ಮವಾಗಿದೆ. ಆದುದರಿಂದ ಸಹೋದ್ಯೋಗಿ ಬಂಧುಗಳು ಕೊರೋನಾ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವ ಕರ್ತವ್ಯದಿಂದ ವಿಮುಖರಾಗಬಾರದು. ಈ ನಿಟ್ಟಿನಲ್ಲಿ ಸ್ವಲ್ಪ ಮಟ್ಟಿನ ಉದಾಸೀನವೂ ಬಹುದೊಡ್ಡ ಅನಾಹುತಕ್ಕೆ ಕಾರಣವಾಗಬಹುದು. ಆರೋಗ್ಯ ಇಲಾಖೆಯ ಮಾರ್ಗದರ್ಶಿ ಸೂತ್ರಗಳನ್ನು ಎಲ್ಲ ಅಧಿಕಾರಿ-ಸಿಬ್ಬಂದಿಯು ತಪ್ಪದೇ ಪಾಲಿಸಿ, ಕೊರೋನಾ ವಿರುದ್ಧದ ಸಮರದಲ್ಲಿ ಭಾಗಿಯಾಗುವಿರೆಂದು ಆಶಿಸುತ್ತೇನೆ.

**ಎಂ.ಬಿ.ರಾಜೇಶ್‌ಗೌಡ**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ

ಆತ್ಮೀಯರೆ,



ಏಪ್ರಿಲ್‌ನಿಂದ ಬರುವ ತ್ರೈಮಾಸಿಕ ಎಂದರೆ ಸಾಮಾನ್ಯವಾಗಿ ಬೇಸಿಗೆಕಾಲ. ಬಿಸಿಲಿನ ಝಳ ದಿನೇ ದಿನೇ ಹೆಚ್ಚಾದಂತೆ ಪ್ರತಿ ಮನೆಗಳಲ್ಲಿ ವಿದ್ಯುತ್ ಪರಿಕರಗಳ ಬಳಕೆಯೂ ಹೆಚ್ಚಾಗುತ್ತದೆ. ಫ್ಯಾನ್, ರೆಫ್ರಿಜಿರೇಟರ್, ಹವಾನಿಯಂತ್ರಿತ ಸೌಲಭ್ಯ, ಇತ್ಯಾದಿಗಳ ಬಳಕೆ ಮನೆಗಳೂ ಸೇರಿದಂತೆ ಕಚೇರಿಗಳು, ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಅದೇ ರೀತಿ ಕೃಷಿ ಪಂಪ್‌ಸೆಟ್ ಸೇರಿದಂತೆ ಕೊಳವೆಬಾವಿ, ತೆರೆದಬಾವಿಗಳಿಂದ ನೀರನ್ನು ಎತ್ತಲು ವಿದ್ಯುತ್‌ಚಾಲಿತ ಪಂಪ್‌ಗಳನ್ನು ಬಳಸಲಾಗುತ್ತದೆ. ಹಾಗಾಗಿ ಈ ಸಂದರ್ಭದಲ್ಲಿ ವಿದ್ಯುತ್ ಬಳಕೆ ಹೆಚ್ಚಾಗುವುದರಿಂದ ಲಭ್ಯವಿರುವ ವಿದ್ಯುತ್ ಅನ್ನು ಅಗತ್ಯಕ್ಕೆ ತಕ್ಕಂತೆ ಸರಬರಾಜು ಮಾಡುವ ಜವಾಬ್ದಾರಿ ನಮ್ಮದಾಗಿರುತ್ತದೆ. 'ಬೆಸ್ಕಾಂ'ನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುವರೆಂಬ ವಿಶ್ವಾಸ ನನಗಿದೆ. ಇದರ ಜತೆಗೆ 'ಕೋವಿಡ್-19'ರ ಬಗ್ಗೆ ಮತ್ತೆ ಎಲ್ಲರೂ ಎಚ್ಚರವಹಿಸಬೇಕಾದ ಪರಿಸ್ಥಿತಿ ಎದುರಾಗಿರುವುದು ತಮಗೆಲ್ಲಾ ತಿಳಿದಿರುವ ಸಂಗತಿ.

ಕಳೆದ ಬಾರಿ ಇಡೀ ವರ್ಷ 'ಕೋವಿಡ್' ಭಯದಲ್ಲಿಯೇ ಕಳೆದುಹೋಯಿತು. ಇನ್ನೇನು ಕಾಯಿಲೆ ನಿಯಂತ್ರಣಕ್ಕೆ ಬಂತು ಎನ್ನುವ ಸಮಾಧಾನ ಎಲ್ಲೆಡೆ ವ್ಯಕ್ತವಾಗುತ್ತಿದಂತೆಯೇ ಈಗ ಎರಡನೇ ಅಲೆ ಶುರುವಾಗಿ ಮತ್ತೆ ಎಲ್ಲರನ್ನೂ ಆತಂಕಕ್ಕೀಡು ಮಾಡಿದೆ. ಸರ್ಕಾರದ ಮಾರ್ಗದರ್ಶನದಂತೆ ಪ್ರತಿಯೊಬ್ಬರೂ ಕರ್ತವ್ಯದಲ್ಲಿದ್ದಾಗ ಮಾಸ್ಕ್ ಧರಿಸುವುದು, ಕೈಗಳನ್ನು ಆಗಾಗ ಸ್ವಚ್ಛಗೊಳಿಸುವುದು ಹಾಗೂ ದೈಹಿಕ ಅಂತರ ಕಾಪಾಡುವುದು ಅನಿವಾರ್ಯವಾಗಿದೆ. ಸರ್ಕಾರದ ನಿರ್ದೇಶನದಂತೆ 45 ವರ್ಷ ದಾಟಿದ ಎಲ್ಲರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದೂ ಆದ್ಯತೆಯ ಮುನ್ನೆಚ್ಚರಿಕೆ ಕ್ರಮವಾಗಿದೆ. ಲಸಿಕೆ ಹಾಕಿಸಿಕೊಳ್ಳುವುದರಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದರ ಜತೆಗೆ ಕೋವಿಡ್ ಎದುರಿಸುವ ವಿಶ್ವಾಸಾರ್ಹತೆಗೆ ಕಾರಣವಾಗುತ್ತದೆ. ಲಸಿಕೆ ಪರಿಣಾಮವಾಗಿ ದೇಹದಲ್ಲಿ ಪ್ರತಿಕಾಯಗಳು (antibodies) ಅಭಿವೃದ್ಧಿಯಾಗಿ ಒಂದು ವೇಳೆ ಕೋವಿಡ್ ಪಾಸಿಟಿವ್ ಕಾಣಿಸಿಕೊಂಡರೂ ಕಾಯಿಲೆಯನ್ನು ಶೀಘ್ರ ಹೊಡೆದು ಓಡಿಸುವ ಶಕ್ತಿ ದೇಹದಲ್ಲಿರುತ್ತದೆ ಎಂಬುದು ವೈದ್ಯರ ಅಭಿಪ್ರಾಯವಾಗಿದೆ.

ಈ ಹಿನ್ನೆಲೆಯಲ್ಲಿ ಅರ್ಹವ್ಯಕ್ತಿಗಳೆಲ್ಲರೂ ಲಸಿಕೆ ಹಾಕಿಸಿಕೊಳ್ಳುವ ಮೂಲಕ ರೋಗದ ನಿಯಂತ್ರಣಕ್ಕೆ ಸಹಕರಿಸಬೇಕಾಗಿ ಕೋರುತ್ತೇನೆ.

ವಂದನೆಗಳೊಂದಿಗೆ.

**ಬಿ.ಆರ್.ಸೋಮಶೇಖರ್**
ಪ್ರಧಾನ ವ್ಯವಸ್ಥಾಪಕರು (ಗ್ರಾಸಂ), ಬೆವಿಕಂ

# ನಮ್ಮ ಊರು, ನಮ್ಮ ಜಿಲ್ಲೆ – ಗದಗ



**ಅವಿಭಜಿತ ಧಾರವಾಡ ಜಿಲ್ಲೆಯ ಭಾಗವಾಗಿದ್ದ ಗದಗ 1997 ರಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂತು.**

ಆರಂಭದಲ್ಲಿ ಗದಗ, ನರಗುಂದ, ರೋಣ, ಶಿರಹಟ್ಟಿ ಮತ್ತು ಮುಂಡರಗಿ ಸೇರಿ ಐದು ತಾಲ್ಲೂಕುಗಳನ್ನು ಹೊಂದಿದ್ದ ಈ ಜಿಲ್ಲೆಗೆ ಇತ್ತೀಚೆಗೆ ಗಂಜೇಂದ್ರಗಢ ಮತ್ತು ಲಕ್ಷೇಶ್ವರಗಳನ್ನು ಸೇರಿಸಿ ಏಳು ತಾಲ್ಲೂಕುಗಳನ್ನು ರಚಿಸಲಾಯಿತು.

ಶೇಂಗಾ, ಹೆಸರು, ಉದ್ದು, ಮೆಣಸಿನಕಾಯಿ, ಹತ್ತಿ ಜಿಲ್ಲೆಯ ಪ್ರಮುಖ ಬೆಳೆಗಳು.

ಬಯಲು ಸೀಮೆಯ ಪ್ರದೇಶವಾಗಿರುವ ಈ ಜಿಲ್ಲೆಯಲ್ಲಿ ಯಾವುದೇ ನದಿಗಳು ಹರಿಯುತ್ತಿಲ್ಲ. ಅಂದಾಜು ಜನಸಂಖ್ಯೆ 12 ಲಕ್ಷ.

**ಇತಿಹಾಸದ ಪ್ರಕಾರ ಗದಗ ನಗರ ಪ್ರಸಿದ್ಧ ರಾಜಮನೆತನಗಳಾದ ಮೌರ್ಯರು, ಕದಂಬರು, ಕುಂತಳರು, ಚಾಲುಕ್ಯರು, ರಾಷ್ಟ್ರಕೂಟರು, ಮರಾಠರು ಮತ್ತು ಮುಸ್ಲಿಮರ ಆಡಳಿತಕ್ಕೆ ಒಳಪಟ್ಟಿತ್ತು.**



ಊರಿನ ಪ್ರಖ್ಯಾತ ತ್ರಿಕೂಟೇಶ್ವರ ಮತ್ತು ವೀರನಾರಾಯಣ ದೇವಾಲಯಗಳನ್ನು ಎರಡನೆಯ ಹರಿಹರ ಕಟ್ಟಿಸಿದನು.

**ಚಾಲುಕ್ಯ ಮತ್ತು ಹೊಯ್ಸಳ ವಾಸ್ತು ಶಿಲ್ಪದ ತ್ರಿಕೂಟೇಶ್ವರ ದೇವಾಲಯವು ಅತಿ ಪ್ರಾಚೀನ ಕಟ್ಟಡವೆನಿಸಿದೆ.** ಗರ್ಭಗುಡಿಯಲ್ಲಿ ಪೂಜೆಗೊಳ್ಳುತ್ತಲಿರುವ **ಹರಿ ಮತ್ತು ಕರ ಬ್ರಹ್ಮಲಿಂಗಗಳು** ಸ್ಥಳೀಯರಿಗೆ ಭಾವೈಕ್ಯದ ತಾಣವಾಗಿದೆ.

ಗದುಗಿನ ವೀರನಾರಾಯಣ ಕುಮಾರವ್ಯಾಸ (ನಾರಣಪ್ಪ)ನಿಗೆ ಒಲಿದ ದೈವ. ಪುರಾಣ ಪ್ರಸಿದ್ಧವಾದ ಈ ದೇವಾಲಯವು ಚಾಲುಕ್ಯ ಮತ್ತು ವಿಜಯನಗರ ಶಿಲ್ಪ ಶೈಲಿಯಲ್ಲಿ ನಿರ್ಮಾಣವಾಗಿದೆ.

ದೇವಾಲಯದ ಮುಖಮಂಟಪದಲ್ಲಿ 20 ಕಂಬಗಳಿವೆ. ಅನೇಕ ಮೂರ್ತಿಗಳನ್ನು ಈ ಕಂಬಗಳಲ್ಲಿ ಚಿತ್ರಿಸಲಾಗಿದೆ. ಒಂದು ಕಂಬವನ್ನು ಕುಮಾರವ್ಯಾಸನ ಕಂಬ' ಎಂದು ಕರೆಯುತ್ತಾರೆ.

ಸ್ಥಳ ಪುರಾಣದ ಪ್ರಕಾರ ಕುಮಾರವ್ಯಾಸನು ಪ್ರತಿ ದಿನವೂ ಕೋನೇರಿ ತೀರ್ಥದಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯಲ್ಲಿ ಈ ಕಂಬದ ಅಡಿಯಲ್ಲಿ ಕುಳಿತು ತನ್ನ ಕಾವ್ಯವನ್ನು ಬರೆದನಂತೆ.



ಕುಮಾರವ್ಯಾಸ ನಿಮಿತ್ತ ಮಾತ್ರವಾಗಿ ವೀರನಾರಾಯಣನೇ ಅಂತರ್ಗತನಾಗಿ ಈ ಮಹಾಕಾವ್ಯವನ್ನು ಬರೆಸಿದನೆಂದು ಭಕ್ತರು ನಂಬುತ್ತಾರೆ. ಈ ಕಂಬಕ್ಕೆ ಇಂದಿಗೂ ಪೂಜೆ ನಡೆಯುತ್ತಲಿದ್ದು, ಕೋನೇರಿ ಹೊಂಡವು ಸಾಕ್ಷಿಯಾಗಿದೆ.

**ಗದಗ ಪಟ್ಟಣದಲ್ಲಿರುವ ವೀರೇಶ್ವರ ಪುಣ್ಯಾಶ್ರಮವು ಪ್ರಸಿದ್ಧ ಪಂಚಾಕ್ಷರಿ ಗವಾಯಿ ಮತ್ತು ಪುಟ್ಟರಾಜ ಗವಾಯಿಗಳ ಕಾರ್ಯಕ್ಷೇತ್ರವಾಗಿದ್ದ ಕಟ್ಟಡವಾಗಿದೆ.**

ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಹಿಂದುಸ್ತಾನಿ ಸಂಗೀತಕ್ಕೆ ಹೊಸ ಚೇತನವನ್ನು ನೀಡಿದ ಮಹಾಮಹಿಮರು. ಇವರ ಸಮರ್ಥ ಶಿಷ್ಯರೂ ಮತ್ತು ಉತ್ತರಾಧಿಕಾರಿಯೂ ಆಗಿ ಆಶ್ರಮಕ್ಕೆ ಹೊಸ ಚೈತನ್ಯ ಮತ್ತು ರೂಪವನ್ನು ನೀಡಿದವರು ಪಂಡಿತ ಪುಟ್ಟರಾಜಗವಾಯಿಗಳು.

ಈ ಇಬ್ಬರು ಗವಾಯಿಗಳ ಪೂರ್ಣ ಪ್ರಮಾಣದ ಬದುಕಿನ ಹೋರಾಟದ ಫಲವಾಗಿ ಈ ಪುಣ್ಯಾಶ್ರಮ ಸ್ಥಾಪನೆಯಾಯಿತು. ತಮ್ಮ ಇಡೀ ಜೀವನವನ್ನು ನಾದ ಪ್ರಪಂಚಕ್ಕಾಗಿ ಮುಡಿಪಾಗಿಟ್ಟಿದ್ದ ಈ ಮಹಾಚೇತನರು ನೂರಾರು ಅಂಧರ ಬಾಳಿಗೆ ಬೆಳಕನ್ನು ನೀಡಿದ ಸಂಸ್ಥೆ ಇದು.

**ಲಕ್ಕುಂಡಿ:** ಗದಗಿಗೆ ಸಮೀಪವಿರುವ ಲಕ್ಕುಂಡಿಗೆ ತನ್ನದೇ ಆದ ಇತಿಹಾಸವಿದೆ. ವೀರ ಬಲ್ಲಾಳನ ಉಪರಾಜಧಾನಿ–

ಯಾಗಿದ್ದ ಇಲ್ಲಿ ಶಿಲ್ಪಕಲಾ ಕೆತ್ತನೆಯ ನಯನ ಮನೋಹರವಾದ ದೇಗುಲಗಳಿವೆ.

**ಇಲ್ಲಿನ ಕಾಶಿವಿಶ್ವನಾಥ ದೇವಾಲಯ ಚಾಲುಕ್ಯರ ಕಾಲದ ವಾಸ್ತುಶಿಲ್ಪದಿಂದ ಕೂಡಿದೆ**. ಇಲ್ಲಿನ ಹಲವು ಜಿನಾಲಯಗಳು ಆಕರ್ಷಕ ಸ್ಮಾರಕಗಳಾಗಿವೆ.

**ಲಕ್ಷ್ಮೇಶ್ವರ –ಪುಲಿಗೆರೆ** : ಗದಗಿನ ಸಮೀಪದಲ್ಲಿರುವ ಲಕ್ಷ್ಮೇಶ್ವರ ಪಟ್ಟಣಕ್ಕೆ ಉತ್ತರ ಕರ್ನಾಟಕದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. **ಹಿಂದೆ ಬಾದಾಮಿ ಚಾಲ್ಯುಕರ ಆಡಳಿತದಲ್ಲಿ ಈ ನಗರವು ಪ್ರಖ್ಯಾತ ಜೈನ ಧಾರ್ಮಿಕ ಕೇಂದ್ರವಾಗಿತ್ತು**.

ಶಾಸನಗಳಲ್ಲಿ ಈ ನಗರವನ್ನು ಪುಲಿಗೆರೆ, ಹುಲಿಗೆರೆ ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ.

**ಆದಿಕವಿ ಪಂಪ ಈ ಪುಲಿಗೆರೆಯಲ್ಲಿ ಕಾವ್ಯ ರಚನೆ ಮಾಡಿದನೆಂದು ಹೇಳಲಾಗಿದೆ**.

12ನೇಯ ಶತಮಾನದಲ್ಲಿ ಲಕ್ಷ್ಮರಸ ಎಂಬ ರಾಜನು ಆಳುತ್ತಲಿದ್ದ ಕಾಲದಲ್ಲಿ ಈ ನಗರವನ್ನು ಲಕ್ಷ್ಮೇಶ್ವರ ಎಂಬ ಹೆಸರಿನಿಂದ ಕರೆಯಲಾಯಿತು.



ಆದಿಲ್‌ಶಾಹಿ ಕಾಲದಲ್ಲಿ ನಿರ್ಮಾಣವಾದ ಆಕರ್ಷಕ ಮಸೀದಿ ಕಟ್ಟಡಗಳೂ ಇಲ್ಲಿವೆ. 11ನೇ ಶತಮಾನದ ಕೊನೆಯಲ್ಲಿ ನಿರ್ಮಿಸಿದ ಸೋಮೇಶ್ವರ ಶಿವಾಲಯ ಚಾಲ್ಯುಕರ ಶಿಲ್ಪ ಕಲಾ ಶೈಲಿಯಲ್ಲಿ ನಿರ್ಮಾಣವಾಗಿರುವ ಪ್ರಮುಖ ದೇಗುಲ.

**ಮಾಗಡಿ ಪಕ್ಷಿಧಾಮ**: ಗದಗಿಗೆ ಸುಮಾರು 25 ಕಿ.ಮೀ ದೂರದ ಮಾಗಡಿಕೆರೆ ರಾಜ್ಯದ ಇತರ ಪಕ್ಷಿಧಾಮಗಳಂತೆ ಅಭಿವೃದ್ಧಿ ಪಥದಲ್ಲಿರುವ ಒಂದು ವಿಶಿಷ್ಟ ಪಕ್ಷಿಧಾಮವಾಗಿದೆ.

ಸುಮಾರು ನೂರು ಎಕರೆ ವಿಸ್ತಾರವಾದ ಕೆರೆಯಲ್ಲಿ ಪಕ್ಷಿಗಳು ಗುಂಪು ಗುಂಪಾಗಿ ತೇಲುತ್ತಾ ವಿಹರಿಸುವ ದೃಶ್ಯ ಮನಮೋಹಕವಾಗಿದೆ.

ಅರಣ್ಯಾಧಿಕಾರಿಗಳ ಪ್ರಕಾರ ಈ ಬಾನಾಡಿಗಳು ಬಹಳ ದೂರದ ದೇಶಗಳಿಂದ ಇಲ್ಲಿಗೆ ವಲಸೆ ಬರುತ್ತವೆ. ಚಳಿಗಾಲದಲ್ಲಿ ತಮ್ಮ ದೇಶದ ಸರೋವರಗಳು ಹೆಪ್ಪುಗಟ್ಟುವುದರಿಂದ ಆಹಾರದ ಅಭಾವವಾಗಿ ಈ ಪಕ್ಷಿಗಳು ಉಷ್ಣ ಪ್ರದೇಶಗಳಿಗೆ ಬಂದು ಮರಿಗಳನ್ನು ಮಾಡಿ ಸಂತತಿ ಅಭಿವೃದ್ಧಿಪಡಿಸಿಕೊಂಡು ಹಿಂದಿರುಗುತ್ತವೆ. ಸಾಮಾನ್ಯವಾಗಿ ಈ ವಲಸೆ ಪಕ್ಷಿಗಳು ನವೆಂಬರ್–ಡಿಸೆಂಬರ್‌ನಿಂದ ಇಲ್ಲಿಗೆ ಬರಲು ಆರಂಭಿಸಿ ಮಾರ್ಚ್‌ವರೆಗೆ ಇಲ್ಲಿರುತ್ತವೆ.

ಪಟ್ಟೆತಲೆಯ ಬಾತು, ಬ್ರಾಹ್ಮಿನಿ ಡಕ್, ಕಪ್ಪು ಐಬಿಸ್, ಪೈಂಟೆಡ್ ಸ್ಟಾರ್ಕ್ ಸ್ಪೂನ್‌ಬಿಲ್ ಮೊದಲಾದ ನೂರಾರು ಜಾತಿಯ ಪಕ್ಷಿಗಳು ಇಲ್ಲಿ ನೋಡಲು ಸಿಗುತ್ತವೆ. ಒಟ್ಟಿನಲ್ಲಿ ಇದು ಪಕ್ಷಿ ವೀಕ್ಷಕರ ಆಕರ್ಷಕ ತಾಣವಾಗಿದೆ.



**ಶಿರಹಟ್ಟಿಯ ಫಕೀರೇಶ್ವರ ಮಠ** : ಇಲ್ಲಿನ ಫಕೀರೇಶ್ವರ ಮಠವು ಹಿಂದೂ–ಮುಸ್ಲೀಮರ ಕೋಮು ಸಾಮರಸ್ಯದ ತಾಣವಾಗಿದೆ. ಪ್ರಾಚೀನ ಕಾಲದ ಈ ಮಠವನ್ನು ಮಹಾಮಾನವತಾವಾದಿ ಫಕೀರೇಶ್ವರರು ಸ್ಥಾಪಿಸಿ ಕಚ್ಚಾಡುತ್ತಿದ್ದವರಲ್ಲಿ ಕೋಮು ಸೌಹಾರ್ದ ಮೂಡಿಸಿ ಸಹಬಾಳ್ವೆಗೆ ಪ್ರೋತ್ಸಾಹಿಸಿದರೆಂದು ಜನರು ಈಗಲೂ ಭಕ್ತಿಭಾವದಿಂದ ಆರಾಧಿಸುತ್ತಾರೆ.

ದೇವಾಲಯದ ಒಂದು ಮಹಾದ್ವಾರವು ಹಿಂದು ಕಲಾ ಶೈಲಿಯಲ್ಲಿ, ಮತ್ತೊಂದು ಇಸ್ಲಾಂ ಕಲಾಕೃತಿಗಳಿಂದ ಕೂಡಿದೆ. ಫಕೀರೇಶ್ವರರ ಗದ್ದುಗೆಯೂ ಹಿಂದು– ಮುಸ್ಲಿಂ ಕಲೆಯನ್ನು ಒಳಗೊಂಡಿದೆ.

**ಕೋಳಿವಾಡ ಗ್ರಾಮ : ಕುಮಾರ ವ್ಯಾಸನ ಜನ್ಮ ಸ್ಥಳ ಕೋಳಿವಾಡ ಎನ್ನಲಾಗಿದೆ**. ನಾರಣಪ್ಪನ ಮನೆ ಅಲ್ಲಿದೆ. ಅವರ ವಂಶದವರು ಈಗಲೂ ಅಲ್ಲಿಯೇ ನೆಲೆಸಿದ್ದು ನಾರಣಪ್ಪ ಬರೆದ ಓಲೆ ಗರಿಗಳನ್ನು ಜೋಪಾನವಾಗಿ ಇಟ್ಟಿದ್ದಾರೆ.

**ಗಜೇಂದ್ರಗಡ ಕೋಟೆ** : ಸುಮಾರು 17 ನೇಯ ಶತಮಾನದಲ್ಲಿ ಇಲ್ಲಿನ ಕೋಟೆ ನಿರ್ಮಾಣವಾಗಿರ–ಬಹುದೆಂದು ಇತಿಹಾಸಕಾರರು ಹೇಳುತ್ತಾರೆ. ಕೋಟೆಯ ಮೇಲೆ ನಿಂತು ನೋಡಿದರೆ ಪೂರ್ವ ಭಾಗದ ಗುಡ್ಡವು ಆನೆಯ ತಲೆಯಂತೆ ಕಾಣುವುದರಿಂದ ಇದಕ್ಕೆ ಗಜೇಂದ್ರಗಡ ಎಂಬ ಹೆಸರು ಬಂದಿರಬೇಕೆಂದು ಹೇಳಲಾಗುತ್ತಿದೆ.

ಹೀಗೆ ಹಲವು ಪ್ರವಾಸಿ ತಾಣಗಳನ್ನು ಹೊಂದಿರುವ ಜಿಲ್ಲೆ ಗದಗವಾಗಿದೆ.

## ಸಾಧಕರು ಇವರು

# ಕಥಕ್ ಕಲಾವಿದೆ ಮಾಯಾ ರಾವ್

ಮಾಯಾ ರಾವ್ ಅವರು ಕಥಕ್ ಶೈಲಿಯ ಶಾಸ್ತ್ರೀಯ ನೃತ್ಯಕಲೆಯಲ್ಲಿ ನಿಷ್ಣಾತರು. ನಾಟ್ಯ ಗುರುವಾಗಿ, ನಾಟ್ಯ ನಿರ್ದೇಶಕರಾಗಿ, ನೃತ್ಯಗಾರ್ತಿಯಾಗಿ ಅವರು ಭಾರತೀಯ ನಾಟ್ಯ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ. ಉತ್ತರ ಭಾರತದ ಕಥಕ್ ನೃತ್ಯ ಕಲೆಯನ್ನು ದಕ್ಷಿಣ ಭಾರತ ಮಾತ್ರವಲ್ಲದೆ ಇಡೀ ವಿಶ್ವದಲ್ಲಿ ಪಸರಿಸುವ ಸಾಧನೆ ಮಾಡಿದ್ದಾರೆ.

1928 ರಲ್ಲಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ಸಂಪ್ರದಾಯಸ್ತ ಕೊಂಕಣಿ ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ಮಾಯಾರವರು ಜನಿಸಿದರು. ಅವರ ತಂದೆ ಅಂದಿನ ಹೆಸರಾಂತ ವಾಸ್ತುಶಿಲ್ಪಿ ಹಟ್ಟಿಯಂಗಡಿ ಸಂಜೀವರಾವ್ ಅವರು, ಮಾಯಾ ಅವರಿಗೆ 3 ಸಹೋದರರು ಮತ್ತು 3 ಸಹೋದರಿ-ಯರಿದ್ದರು. ಕಿರಿಯ ವಯಸ್ಸಿನಲ್ಲಿಯೇ ಹಿಂದೂಸ್ತಾನಿ ಶಾಸ್ತ್ರೀಯ ಹಾಡುಗಾರಿಕೆ ಹಾಗೂ ದಿಲ್‌ರುಬಾ ವಾದ್ಯವನ್ನು ರಾಮರಾವ್ ಅವರಲ್ಲಿ ಅಭ್ಯಸಿಸಿದರು. ಆ ಕಾಲದಲ್ಲಿ ಸಂಪ್ರದಾಯಸ್ಥ ಹೆಣ್ಣು ಮಕ್ಕಳಿಗೆ ನೃತ್ಯ ಕಲಿಕೆ ನಿಷೇಧವಾಗಿತ್ತು. ತಂದೆಯೊಡನೆ ತನ್ನ 12ನೇ ವರ್ಷದಲ್ಲಿ ಬಿಆರ್‌ವಿ ಸಭಾಂಗಣದಲ್ಲಿ ಹೆಸರಾಂತ ನೃತ್ಯಪಟು ಉದಯಶಂಕರ್ ಅವರ ನೃತ್ಯ ಕಾರ್ಯಕ್ರಮ ವೀಕ್ಷಿಸಿದ ನಂತರ, ತಂದೆಯವರು ತಮ್ಮ ಹೆಣ್ಣು ಮಕ್ಕಳಿಗೆ ನೃತ್ಯ ಕಲಿಸಲು ತೀರ್ಮಾನಿಸಿದರು.



ಮಾಯಾರವರ ಗುರುಗಳಾದ ಪಂಡಿತ್ ರಾಮರಾವ್ ನಾಯಕ್ ಅವರು ಆಗ್ರ ಘರಾನದ ಖ್ಯಾತ ಗಾಯಕ ಉಸ್ತಾದ್ ಫಯಾಜ್ ಖಾನ್ ಅವರ ಶಿಷ್ಯರಾಗಿದ್ದರು. ಅವರು ಬೆನ್ಸನ್ ಟೌನ್‌ನಲ್ಲಿ ಸಂಗೀತ ಮತ್ತು ನೃತ್ಯ ಶಾಸ್ತ್ರದ ಶಾಲೆಯನ್ನು ನಡೆಸುತ್ತಿದ್ದರು. ಈ ಶಾಲೆಯಲ್ಲಿ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಕಲೆಗಳ ವಿವಿಧ ವಿಭಾಗಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ದಕ್ಷಿಣ ಭಾರತದ ಖ್ಯಾತ ಕಥಕ್ ಗುರು ಜಯಪುರ್ ಘರಾನದ ಸೋಹನ್ ಲಾಲ್ ಇಲ್ಲಿ ಶಿಕ್ಷಣ ನೀಡುತ್ತಿದ್ದರು. ಮಾಯಾ ರಾವ್ ಅವರನ್ನು ಕಥಕ್ ಕಲಿಯಲು ವಯಸ್ಸು ಹೆಚ್ಚೆಂದು ಪರಿಗಣಿಸಲಾಗಿದ್ದು. ಅವರ ಇಬ್ಬರು ತಂಗಿಯರಿಗೆ ನೃತ್ಯ ಶಿಕ್ಷಣ ನೀಡಲಾಗುತ್ತಿತ್ತು. ಆದರೆ ಮಾಯಾ ಅವರು ಕಥಕ್ ನೃತ್ಯ ಕಲಿಯಲೇಬೇಕೆಂದು ಹಂಬಲವನ್ನು ವ್ಯಕ್ತಪಡಿಸಿದಾಗ ಅವರ ತಂದೆಯವರು ಷರತ್ತು ವಿಧಿಸಿದರು. ಅದೇನೆಂದರೆ ಮಾಯಾ ಅವರು ನೃತ್ಯವನ್ನು ವೃತ್ತಿ ಮಾಡಿಕೊಳ್ಳಬಾರದು ಮತ್ತು ನೃತ್ಯ ಕಾರ್ಯಕ್ರಮಗಳನ್ನು ನೀಡಬಾರದೆಂಬುದಾಗಿತ್ತು. ಮಾಯಾ ಅವರು ಸೋಹನ್ ಲಾಲ್ ಅವರ ಬಳಿ 2 ವರ್ಷಗಳ ಕಾಲ ಕಥಕ್ ನೃತ್ಯಾಭ್ಯಾಸ ಮಾಡಿದರು. ಅವರು ಸಾರಸ್ವತ ಸಮಾಜದ ಕಾರ್ಯಕ್ರಮದಲ್ಲಿ ಟೌನ್‌ಹಾಲ್‌ನಲ್ಲಿ ನೃತ್ಯ ಪ್ರದರ್ಶನ ನೀಡಿದಾಗ ಅವರ ತಂದೆಯವರು ಆಕ್ಷೇಪಿಸಲಿಲ್ಲ.

ತಮ್ಮ ಶಾಲಾ ಶಿಕ್ಷಣದ ಬಳಿಕ ಮಾಯಾ ಅವರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದ ಬಿ.ಎ. (ಆನರ್ಸ್) ಅಭ್ಯಸಿಸಿದರು. ನಂತರ ಅವರು ಮಹಾರಾಣಿ ಕಾಲೇಜಿನ ಬಡ ವಿದ್ಯಾರ್ಥಿಗಳ ನೆರವಿಗಾಗಿ 1947 ರಲ್ಲಿ ಅಭಿನಯಿಸಿದ ನೃತ್ಯ ರೂಪಕ "ಸೀತಾ ಹರಣ್" ಅವರ ಚೊಚ್ಚಲ ನೃತ್ಯ ಕಾರ್ಯಕ್ರಮವಾಗಿತ್ತು. ಅಷ್ಟರಲ್ಲಿ ತಂದೆಯವರು ನಿಧನ ಹೊಂದಿದ್ದು, ಸಂಸಾರದ ಸಂಪೂರ್ಣ ಜವಾಬ್ದಾರಿ ಸಹೋದರ ಮನೋಹರ್ ಅವರೊಂದಿಗೆ ಮಾಯಾ ಅವರು ಹೊರಬೇಕಾಯಿತು. ಅವರು ತಮ್ಮ 17 ನೇಯ ವಯಸ್ಸಿನಲ್ಲಿಯೇ ನೃತ್ಯ ಕಲೆಯ ಶಿಕ್ಷಣ ನೀಡಲಾರಂಭಿಸಿದರು.

ನೃತ್ಯ ಶಿಕ್ಷಣವನ್ನು ಮುಂದುವರೆಸಲು 1951 ರಲ್ಲಿ ಜಯಪುರಕ್ಕೆ ತೆರಳಿ ಅಲ್ಲಿ ಜಯಪುರ ಘರಾನದ ಗುರು ಸುಂದರ್ ಪ್ರಸಾದ್ ಅವರ ಬಳಿ ಶಿಕ್ಷಣ ಪಡೆದುದಲ್ಲದೆ, ಆ ಸಮಯದಲ್ಲೇ ಜಯಪುರದ ಮಹಾರಾಣಿ ಗಾಯತ್ರೀದೇವಿ ಬಾಲಕಿಯರ ಶಾಲೆಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದರು. ನಂತರ 1955 ರಲ್ಲಿ ಮಾಯಾ ಅವರಿಗೆ ಸ್ಕಾಲರ್‌ಶಿಪ್ ಲಭ್ಯವಾಗಿ ಖ್ಯಾತ ಗುರು, ಲಕ್ನೋ ಘರಾನದ ಶಂಭು ಮಹಾರಾಜರಲ್ಲಿ ನಾಲ್ಕು ವರ್ಷಗಳ ಕಾಲ ಶಿಕ್ಷಣ ಪಡೆಯಲು ಅವಕಾಶ ದೊರೆಯಿತು. ಅಂದು ಭಾರತೀಯ ಕಲಾಕೇಂದ್ರವೆಂದು ಹೆಸರಿದ್ದ ಈ ಸಂಸ್ಥೆ ಮುಂದೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕಥಕ್ ಡಾನ್ಸ್ ಎಂದು ಹೆಸರುವಾಸಿಯಾಗಿದ್ದು, ಮಾಯಾ ಅವರು ಇಲ್ಲಿನ ಪ್ರಥಮ ವಿದ್ಯಾರ್ಥಿಯಾದರು. ಪಂಡಿತ್ ಶಂಭು ಮಹಾರಾಜರು ಪ್ರಥಮ ಗುರುಗಳಾಗಿದ್ದರು.

1960 ರಲ್ಲಿ ಮಾಯಾ ರಾವ್ ಅವರು ನೃತ್ಯ ಶಾಸ್ತ್ರದಲ್ಲಿ

ಮಾಸ್ಟರ್ಸ್ ಪದವಿ ಪಡೆಯಲು ರಷ್ಯಾ ಸಾಂಸ್ಕೃತಿಕ ಸ್ಕಾಲರ್‌ಶಿಪ್‌ಗೆ ಆಯ್ಕೆಗೊಂಡರು. 1964 ರಲ್ಲಿ ಅವರು ಭಾರತಕ್ಕೆ ಮರಳಿ, ನವದೆಹಲಿಯಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರವರ ಸಹಾಯದಿಂದ ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕೋರಿಯೋಗ್ರಫಿ ಶಾಲೆಯನ್ನು ದೆಹಲಿಯಲ್ಲಿ ಸ್ಥಾಪಿಸಿದರು.

ಹಲವಾರು ವರ್ಷ ದೆಹಲಿಯಲ್ಲಿ ವಾಸವಾಗಿದ್ದ ಮಾಯಾ ರಾವ್ ಅವರು 1987 ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ಆಹ್ವಾನದ ಮೇರೆಗೆ ತಮ್ಮ ನೃತ್ಯ ಶಾಲೆಯನ್ನು ಬೆಂಗಳೂರಿನ ಮಲ್ಲೇಶ್ವರಕ್ಕೆ ಸ್ಥಳಾಂತರಿಸಿದರು.

ಅದೇ ವರ್ಷ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿ ನೇಮಕಗೊಂಡ ಅವರು 1990 ರವರೆಗೆ ಸೇವೆ ಸಲ್ಲಿಸಿದರು. ಅವರ ಅಧಿಕಾರಾವಧಿಯಲ್ಲಿ ಸೋಮನಾಥಾಪುರ, ಪಟ್ಟದಕಲ್ಲು ಹಾಗೂ ಹಳೇಬೀಡುಗಳಂತಹ ಪಾರಂಪರಿಕ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವಗಳನ್ನು ಆಯೋಜಿಸಿದರು. 1989 ರಲ್ಲಿ ಅವರ ನೃತ್ಯ ಶಾಸ್ತ್ರದ ಅಪೂರ್ವ ಸೇವೆಗಾಗಿ ಸಂಗೀತ ಅಕಾಡೆಮಿಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು 1986 ರಲ್ಲೂ, ಶಾಂತಲಾ ಪ್ರಶಸ್ತಿಯನ್ನು 1990 ರಲ್ಲಿಯೂ ನೀಡಿ ಸನ್ಮಾನಿಸಿತು. 2013 ರಲ್ಲಿ ಅವರು ತಮ್ಮ ನೃತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಅಸಾಧಾರಣ ಕೊಡುಗೆಗಾಗಿ "ಟ್ಯಾಗೋರ್ ರತ್ನ" ಪ್ರಶಸ್ತಿಗೆ ಭಾಜನರಾದರು.

ಮಾಯಾ ರಾವ್ ಅವರು ತಮ್ಮ ನಾಟ್ಯ ಶಾಲೆಯಲ್ಲಿ ಸುಮಾರು ಮೂರು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ನೃತ್ಯ ಶಿಕ್ಷಣ ನೀಡಿದ್ದು, ಅವರ ಶಿಷ್ಯರಲ್ಲಿ ನಿರುಪಮಾ ರಾಜೇಂದ್ರ, ಸೈಯದ್ ಸಲಾವುದ್ದೀನ್ ಪಾಷ, ಸತ್ಯನಾರಾಯಣ ಚರ್ಕ, ಅಕುಲ್ ಬಾಲಾಜಿ ಹಾಗೂ ತಮ್ಮ ಪುತ್ರಿ ಮಧು ನಟರಾಜ್ ಅವರುಗಳು ಸೇರಿದ್ದಾರೆ.

ಮಾಯಾ ರಾವ್ ಅವರ ಆತ್ಮಕಥೆ "ಮಾಯಾ ರಾವ್ – ಎ ಲೈಫ್‌ಟೈಮ್ ಇನ್ ಕೋರಿಯೋಗ್ರಫಿ" ಪುಸ್ತಕ 2014 ರ ಜುಲೈ ತಿಂಗಳಲ್ಲಿ ಲೋಕಾರ್ಪಣೆಯಾಯಿತು.

ಅವರು ತಮ್ಮ ಅಪಾರ ಅಭಿಮಾನಿಗಳನ್ನು 2014 ರ ಸೆಪ್ಟೆಂಬರ್ 1 ರಂದು ಅಗಲಿದರು. ಅವರ ಪರಂಪರೆಯನ್ನು ಅವರ ಪುತ್ರಿಯಾದ ಮಧು ನಟರಾಜ್ ಅವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

## ಸದಾಸಿದ್ಧ



ಕತ್ತಲೆಯ ಕಾರ್ಮೋಡ ಸರಿಸಿ
ಬೆಳಕಿನಣತೆಯ ಹಚ್ಚಲು
ಬಾಡಿದ ಪೈರಿಗೆ ದಾಹವ ನೀಗಲು
ಈಗಲೇ ಬರುವೆನು ಅಣ್ಣ...
ಅವಧಿಯೊಳಗೆ ಪಾವತಿಸಿ ಬಿಡಿ
ನಿಮ್ಮ ಮನೆಯ ವಿದ್ಯುತ್ ಬಿಲ್ ಮೊತ್ತ
ನಿಮ್ಮ ಸೇವೆಗೆ ಇರುವೆನು
ಈ ಪವರ್ ಮ್ಯಾನ್ ಸದಾಸಿದ್ಧ.

ಮೊಬೈಲ್ ಕರೆಗಳು ನಿರಂತರ
ಕಂಬದಲಿ ಕೆಲಸ ನಿರ್ವಹಿಸುವಾಗ
ರಿಸೀವ್ ಮಾಡಲಾಗಲ್ಲ, ಯಾವುದೇ ಕರೆ ಶೀಘ್ರ
ಕರೆ ಮಾಡಿದ ನಿಮಗೆ, ನೀಡಲಾಗಲ್ಲ
ನಮ್ಮಿಂದ ಉಡಾಫೆ ಉತ್ತರ
ನಿಮ್ಮಂತೆ ನಮಗೂ ಇದೆ ಒತ್ತಡ
ಮೇಲಾಧಿಕಾರಿಗಳಿಗೆ ನೀಡಬೇಕಾಗಿದೆ
ನಮ್ಮ ಕೆಲಸದ ಸಮಂಜಸ ಉತ್ತರ
ಅವಧಿಯೊಳಗೆ ಪಾವತಿಸಿ ಬಿಡಿ
ನಿಮ್ಮ ಸ್ಥಾವರದ ವಿದ್ಯುತ್ ಬಿಲ್ ಮೊತ್ತ
ನಿಮ್ಮ ಸೇವೆಗೆ ಇರುವೆನು
ಈ ಪವರ್ ಮ್ಯಾನ್ ಸದಾಸಿದ್ಧ.

ಅಣ್ಣಾ ನಿಧಾನಿಸು.. ನಿಧಾನಿಸು
ಇದು ಕಣ್ಣಿಗೆ ಕಾಣುವ ವಸ್ತುವಲ್ಲ
ನಮಗೂ ಬೇಕಾಗಿದೆ ಜೀವದ ಸುರಕ್ಷತೆ
ಸುರಕ್ಷತಾ ಸಾಧನಾ ಅಳವಡಿಸಿ
ಬೇಗ ಮುಗಿಸಿಕೊಡುವೆ ನಿಮ್ಮ ಕೆಲಸ
ಅವಧಿಯೊಳಗೆ ಪಾವತಿಸಿ ಬಿಡಿ
ನಿಮ್ಮ ಸ್ಥಾವರಗಳ ವಿದ್ಯುತ್ ಬಿಲ್ ಮೊತ್ತ
ನಿಮ್ಮ ಸೇವೆಗೆ ಇರುವೆನು
ಈ ಪವರ್ ಮ್ಯಾನ್ ಸದಾಸಿದ್ಧ.



**ಶ್ರೀ ಟಿ.ಮಂಜುನಾಥ**
ಮೇಲ್ವಿಚಾರಕ, ಕಾಮಗಾರಿ ಘಟಕ
ಬೆಸ್ಕಾಂ, ಹಿರಿಯೂರು


## ಇವರು ನಮ್ಮ ಸಾಹಿತಿಗಳು

## ಡಾ. ಜಿ.ಎಸ್.ಆಮೂರ

ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ವಿಮರ್ಶಕ, ಅನುವಾದಕ ಹಾಗೂ ಸಾಹಿತ್ಯ ಲೋಕದ ಹಿರಿಯರೂ ಆಗಿ ಪ್ರಸಿದ್ಧರಾದವರು ಡಾ.ಜಿ.ಎಸ್.ಆಮೂರ ಅವರು.

ವೃತ್ತಿಯಿಂದ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಡಾ.ಜಿ.ಎಸ್.ಆಮೂರ ಅವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲೂ ಅಪಾರ ಜ್ಞಾನವುಳ್ಳವರಾಗಿದ್ದು ಖ್ಯಾತ ಸಂಶೋಧಕರಾಗಿಯೂ ಹೆಸರಾಗಿದ್ದಾರೆ.

ಧಾರವಾಡ ಜಿಲ್ಲೆಯ ಬೊಮ್ಮನಹಳ್ಳಿಯಲ್ಲಿ 1925 ರ ಮೇ 8 ರಂದು ಗುರುರಾಜಶಾಮಾಚಾರ್ಯ ಆಮೂರ ಅವರು ಜನಿಸಿದರು.



ಮುಂಬೈ ವಿಶ್ವವಿದ್ಯಾನಿಲಯದಿಂದ ಬಿ.ಎ. ಹಾಗೂ ಎಂ.ಎ.ಪದವಿಗಳಿಸಿದ ಅವರು ಕರ್ನಾಟಕ ವಿಶ್ವವಿದ್ಯಾನಿಲಯದಿಂದ 1961 ರಲ್ಲಿ ಪಿಎಚ್.ಡಿ ಪದವಿ ಪಡೆದರು. 1972 ರಲ್ಲಿ ಅಮೆರಿಕದ ವಿಶ್ವವಿದ್ಯಾನಿಲಯದಿಂದ ಸೀನಿಯರ್ ಫುಲ್ ಬ್ರೈಟ್ ಸ್ಕಾಲರ್‌ಶಿಪ್ ಪಡೆದು ಸಂಶೋಧನೆ ನಡೆಸಿದ ಅವರು 1973 ರಲ್ಲಿ ಬ್ರಿಟಿಷ್ ಕೌನ್ಸಿಲ್‌ನ ಆಮಂತ್ರಣದ ಮೇರೆಗೆ ಇಂಗ್ಲೆಂಡ್‌ಗೂ ಭೇಟಿ ನೀಡಿದ್ದರು.

ಗದುಗಿನ ಜಗದ್ಗುರು ತೋಂಟದಾರ್ಯ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದ ಅವರು ನಂತರ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ರೀಡರ್ ಆಗಿ ಸೇವೆ ಸಲ್ಲಿಸಿದರು.

ನಂತರ ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಪ್ರೊಫೆಸರ್ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ 1988 ರಲ್ಲಿ ನಿವೃತ್ತಿ ಹೊಂದಿದರು.

ಡಾ.ಆಮೂರ ಅವರು ಇಂಗ್ಲಿಷ್‌ನಲ್ಲಿ ರಚಿಸಿರುವ ವಿಮರ್ಶಾ ಗ್ರಂಥಗಳು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮನ್ನಣೆ ಪಡೆದಿವೆ. 'ಮಹಾಕವಿ ಮಿಲ್ಟನ್', 'ಕೃತಿ ಪರೀಕ್ಷೆ', ಸಮಕಾಲೀನ ಕತೆ ಕಾದಂಬರಿ', 'ಅ.ನ.ಕೃಷ್ಣರಾಯರು', 'ಅರ್ಥ ಲೋಕ', 'ಭುವನದ ಭಾಗ್ಯ', 'ಕನ್ನಡ ಕಾದಂಬರಿಯ ಬೆಳವಣಿಗೆ', ಸಾತ್ವಿಕ ಪಥ, 'ವಿರಾಟ ಪುರುಷ: ಶ್ರೀರಂಗ ಸಾಹಿತ್ಯ ಸಮೀಕ್ಷೆ' ಇವೇ ಮುಂತಾದವು ಆಮೂರ ಅವರ ಪ್ರಮುಖ ವಿಮರ್ಶಾ ಗ್ರಂಥಗಳಾಗಿವೆ.

ಕನ್ನಡದಲ್ಲಿನ ಸೈದ್ಧಾಂತಿಕ ವಿಮರ್ಶೆಯ ಕೊರತೆಯನ್ನು ತಮ್ಮ ಮೌಲಿಕ ಗ್ರಂಥಗಳ ಮೂಲಕ ಅವರು ತುಂಬಿದ್ದಾರೆ. ಡಾ.ಆಮೂರ ಅವರು ಅನುವಾದಕರಾಗಿಯೂ ಸಾಕಷ್ಟು ಕೆಲಸ ಮಾಡಿದ್ದಾರೆ. ಕುವೆಂಪು, ಬೇಂದ್ರೆ, ಚನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ ಅವರ ಕೆಲವು ಕವಿತೆಗಳನ್ನು, ಸರ್ವಜ್ಞ ಮತ್ತು ಬಸವಣ್ಣ ಅವರ ಕೆಲವು ವಚನ-ಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಪಂಪ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ಬೇಂದ್ರೆ, ಮಾಸ್ತಿ, ಮಾಳವಾಡ ಪ್ರಶಸ್ತಿಗಳು, ಭಾರತೀಯ ಭಾಷಾ ಪರಿಷತ್ತಿನ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಲಭಿಸಿವೆ.

ಕನ್ನಡದ ಮೇರು ವಿಮರ್ಶಕ ಹಾಗೂ ಬರಹಗಾರರಾದ ಡಾ.ಆಮೂರ ಅವರು ತಮ್ಮ 95 ನೇ ವಯಸ್ಸಿನಲ್ಲಿ 2020 ರ ಸೆಪ್ಟೆಂಬರ್ 28 ರಂದು ನಿಧನರಾದರು.

### ಹುಟ್ಟುಹಬ್ಬದ ಶುಭಾಶಯಗಳು

2021ನೇ ವರ್ಷದ ಏಪ್ರಿಲ್-ಜೂನ್ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2021ನೇ ವರ್ಷದ ಏಪ್ರಿಲ್-ಜೂನ್ ತಿಂಗಳಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಲವಂಗ



ಲವಂಗವು ಸಾಂಬಾರ ಪದಾರ್ಥವಾಗಿದ್ದು ಎಲ್ಲರ ಮನೆಯಲ್ಲಿಯೂ ಉಪಯೋಗಿಸಲ್ಪಡುತ್ತದೆ. ಔಷಧವಾಗಿಯೂ ಪ್ರಯೋಜನಕಾರಿಯಾಗಿದೆ.

ಇದು ಸಿಹಿ ಮತ್ತು ಖಾರದ ಭಕ್ಷ್ಯಗಳಲ್ಲಿ ಸಮ್ಮಿಳಿತ-ವಾಗುವುದರಿಂದ ಮನೆಯಲ್ಲಿ ಪಾಕಯೋಗ್ಯ ಸಾಂಬಾರ ಪದಾರ್ಥವಾಗಿ ಉಪಯೋಗಿಸಲ್ಪಡುತ್ತದೆ. ತಾಂಬೂಲದಲ್ಲಿ ಇದನ್ನು ಧಾರಾಳವಾಗಿ ಬಳಸುತ್ತಾರೆ.

ಲವಂಗವನ್ನು ಬಾಯಲ್ಲಿ ಹಾಕಿ ಅಗಿಯುವುದರಿಂದ ದುರ್ಗಂಧವು ನಿವಾರಣೆಯಾಗುತ್ತದೆ. ಒಂದು ಲವಂಗಕ್ಕೆ ಒಂದು ಹರಳು ಉಪ್ಪು ಸೇರಿಸಿ ಅಗಿದು ರಸ ನುಂಗುತ್ತಿದ್ದರೆ ಗಂಟಲು ಕೆರೆತ, ಕೆಮ್ಮು ನಿವಾರಣೆಯಾಗುತ್ತದೆ. ಅದರ ಕಷಾಯ ಮಾಡಿ ಆಗಾಗ ಕುಡಿಯುತ್ತಿದ್ದರೆ ಹೊಟ್ಟೆ ಉಬ್ಬರ, ಅಜೀರ್ಣ ಕಡಿಮೆಯಾಗುತ್ತದೆ.

ಕಾಳು ಮೆಣಸು, ಬೆಳ್ಳುಳ್ಳಿ, ಒಂದು ಹರಳು ಉಪ್ಪು ಜತೆಗೆ ಲವಂಗ ಸೇರಿಸಿ ಜಜ್ಜಿ ಉಂಡೆಮಾಡಿ ಹಲ್ಲು ನೋವು ಇರುವ ಜಾಗದಲ್ಲಿ ಇಟ್ಟರೆ ನೋವು ನಿವಾರಣೆಯಾಗುತ್ತದೆ.

ಲವಂಗದ ಎಣ್ಣೆ ಕೂಡ ಹಲ್ಲುನೋವಿಗೆ ಸಿದ್ಧ ಔಷಧವಾಗಿದೆ.

# ಗಸಗಸೆ



ಗಸಗಸೆಯಲ್ಲಿ ಬಿಳಿ ಮತ್ತು ಕೆಂಪು ಎಂದು ಎರಡು ವಿಧಗಳಿವೆ.

ಇದರ ಗಿಡ 4 ರಿಂದ 5 ಅಡಿ ಎತ್ತರಕ್ಕೆ ಬೆಳೆಯುತ್ತದೆ.

ಇದು ವಾತನಾಶಕ, ನಿದ್ರಾಕಾರಕ, ನೋವು ನಿವಾರಕ ಮತ್ತು ವೀರ್ಯವರ್ಧಕ ಎಂದು ಹೇಳಲಾಗುತ್ತದೆ.

ಗಸಗಸೆ ಪಾಯಸ ಬಹುರುಚಿಕರ ಮತ್ತು ಇಷ್ಟವಾದ ಪೇಯವಾಗಿರುತ್ತದೆ. ಇದನ್ನು ನೆನೆಸಿಟ್ಟು ಅರೆಯುವಾಗ ದ್ರಾಕ್ಷಿ, ಗೋಡಂಬಿ, ಬಾದಾಮಿಗಳನ್ನು ಬೆರೆಸಿ, ಹಾಲು ಮತ್ತು ಸಕ್ಕರೆಯಲ್ಲಿ ಹಾಕಿ ಬಿಸಿಮಾಡಿ ಕುಡಿದರೆ ಸ್ವಾದಿಷ್ಟವಾಗಿರುತ್ತದೆ. ಇದು ದೇಹಕ್ಕೆ ಹಿತಕರ ಮತ್ತು ಪುಷ್ಟಿದಾಯಕ ಆಹಾರವಾಗಿರುತ್ತದೆ.

ಪ್ರತಿದಿನ ಒಂದು ಬಾರಿ ಇದರ ಸೇವನೆ ಆರೋಗ್ಯಕ್ಕೆ ಉತ್ತಮ ಎನ್ನುತ್ತಾರೆ.

ಕಗ್ಗದ ಬೆಳಕು

# ದೀನದುರ್ಬಲರಿಗೆ ಸಕ್ಕರೆಯಾಗು



ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ॥
ಎಲ್ಲರೊಳಗೊಂದಾಗು–ಮಂಕುತಿಮ್ಮ ॥

**ಬೆಟ್ಟದ ತಪ್ಪಲಲ್ಲಿ ಹಚ್ಚ ಹಸುರಾಗಿ ಬೆಳೆದ ಹುಲ್ಲು ಉರಿಬಿಸಿಲಿಗೆ ಒಣಗಿಹೋದರೂ, ನೆಲದಾಳದಲ್ಲೆಲ್ಲೋ ಜೀವ ಹಿಡಿದು ಮಳೆಗಾಗಿ ಕಾಯುತ್ತದೆ**. ಮೊದಲ ಮಳೆ ಹನಿಗಳು ಸ್ಪರ್ಶಿಸಿದೊಡನೆಯೇ ಜೀವವು ಚಿಗುರುತ್ತದೆ, ಹಸಿರು ಅರಳುತ್ತದೆ. ಬಿಸಿಲ ಬೇಗೆಯನ್ನು ತಡೆಯಲಾರೆನೆಂದೋ, ಮಳೆಯೇ ಸುರಿಯುತ್ತಿಲ್ಲವೆಂದೋ ಅವು ಖಿನ್ನತೆಗೆ ಒಳಗಾಗುವುದಿಲ್ಲ. ಎಷ್ಟು ಕಷ್ಟವಾದರೂ ಅನುಕೂಲ ಸಂದರ್ಭವು ಒದಗಿ ಬಂದಾಗ ಮತ್ತೆ ಬದುಕಿಕೊಳ್ಳುತ್ತವೆ. ಬೆಟ್ಟದ ಎತ್ತರದಿಂದ ಇಳಿಜಾರಿನಲ್ಲಿ ದೌಡಾಯಿಸುವ ನೀರಿನ ರಭಸಕ್ಕೆ, ಬಲವಾಗಿ ಬೀಸುವ ಗಾಳಿಯ ತೀವ್ರತೆಗೆ ಸೋತು ಮಣ್ಣಿನಲ್ಲಿ ಮಲಗಿಬಿಡುತ್ತವೆ. ಪ್ರತಿಕೂಲ ಪರಿಸ್ಥಿತಿ ತಿಳಿಯಾದ ಮೇಲೆ ಮತ್ತೆ ನೆಟ್ಟಗಾಗುತ್ತವೆ. ಆದರೆ ಮರಗಿಡಗಳು ಹುಲ್ಲಿನಂತಲ್ಲ. ತಮಗಿಂತ ಬಲಿಷ್ಠ ಪ್ರವಾಹ, ಗಾಳಿಯ ಬೀಸುವಿಕೆ ಎದುರಿಸಿ ನಿಲ್ಲುವುದರಿಂದ ನೆಲಕ್ಕುರುಳುತ್ತವೆ ಅಥವಾ ರೆಂಬೆ ಕೊಂಬೆಗಳು ಮುರಿದು ಹೋಗುತ್ತವೆ. ನಿಸರ್ಗ ಸಹಜವಾದ ಈ ಪ್ರಕ್ರಿಯೆಯಲ್ಲಿ ಮನುಷ್ಯ ಬದುಕಿಗೆ ಪಾಠವಿದೆ. ಜೀವನದಲ್ಲಿ ಸೋಲು ಅಪ್ಪಳಿಸಿದರೆ, ಬದುಕು ಬರಡಾಯಿತೆನ್ನಿಸಿದರೆ ಜೀವನೋತ್ಸಾಹವನ್ನು ಕಳೆದುಕೊಳ್ಳುವುದಿಲ್ಲ. ಭರವಸೆಯಿಂದ ಹೊಸ ಬೆಳಕನ್ನು ನಿರೀಕ್ಷಿಸಬೇಕು. ಈ ದಿನದ ಸೋಲು, ಬರುವ ನಾಳೆಯ ಗೆಲುವಿಗೆ ನಡೆಮುಡಿಯ ಹಾಸಬೇಕು. ಭರಿಸಲಾಗದ ದುಃಖ, ಸಂಕಟಗಳೇ ಆದರೂ ಸಂಯಮದಿಂದ ಅರಗಿಸಿಕೊಂಡರೆ, ಅರಿವಿನ ನೇಸರನ ಆಸರೆಯಲ್ಲಿ ಬದುಕು ಕಳೆಗಟ್ಟುತ್ತದೆ.

ಕೊಚ್ಚಿಕೊಂಡು ಮುನ್ನುಗ್ಗುವ ಪ್ರವಾಹವನ್ನೋ, ಬಿರುಗಾಳಿಯನ್ನೋ ತಡೆದು ನಿಲ್ಲಿಸುತ್ತೇನೆ ಎಂದು ಹೊರಡುವುದು ಜಾಣ್ಮೆಯಲ್ಲ. **ವಿಷಮ ಸ್ಥಿತಿಗೆ ಒಳಗಾದಾಗ, ಪರಿಸ್ಥಿತಿ ಕೈಮೀರಿ ಹೋಯಿತೆನ್ನುವ ಸಂದರ್ಭದಲ್ಲಿ ಹುಲ್ಲಿನಂತೆ ತಟಸ್ಥವಾಗುವುದೇ ಲೇಸು. ಆದರೆ ಸಮಯಾವಕಾಶ ಬಳಸಿಕೊಂಡು ಮತ್ತೆ ನಮ್ಮ ಅಸ್ತಿತ್ವ, ಅಸ್ಮಿತೆಯನ್ನು ಉಳಿಸಿಕೊಳ್ಳಲೇಬೇಕು. ಪೂರ್ವಗ್ರಹ ಪೀಡಿತ, ಅಹಂಕಾರಿ ಮನಸ್ಸುಗಳ ಬಗ್ಗೆ ಉದಾಸೀನ ತಾಳಿ ಮೌನವಹಿಸುವುದೇ ಸರಿ**. ವಿರೋಧಿಸಿ ಗೆಲ್ಲುವ ಸಾಧ್ಯತೆ ಇದ್ದರೆ ಸತ್ಯಕ್ಕೆ ಮೌಲ್ಯ ಸಿಕ್ಕೀತು. ಅಲ್ಲದೆ ಹೋದರೆ ಅನ್ಯಾಯವೇ ವಿಜೃಂಭಿಸುವ ಹಾಗಾದೀತು. ಉಪಾಯದಿಂದ ಕಾರ್ಯ ಸಾಧನೆ ಮಾಡುವುದೇ ವಿವೇಕಯುತ ನಡೆ.

ಹೂದೋಟದಲ್ಲೋ, ಅಂಗಳದಂಚಿನಲ್ಲೋ ಅರಳಿ ನಗುವ ಮಲ್ಲಿಗೆಯ ಕಂಪು ಸುತ್ತಲೆಲ್ಲ ಪಸರಿಸಿ ಆಹ್ಲಾದತೆಯನ್ನು ಕರುಣಿಸುತ್ತದೆ. ಮನಸ್ಸು ಶಾಂತಗೊಂಡು ನಸುನಗು ಮೂಡುತ್ತದೆ. ಅಂತೆಯೇ ಕುಟುಂಬದೊಳಗೆ ಪ್ರತಿಯೊಂದರ ಬಗ್ಗೆಯೂ ಕಟಕಿಯಾಡುತ್ತಾ, ನಂದಿಸುತ್ತಾ ಜಗಳವಾಡುವ ವ್ಯಕ್ತಿಯು ಮನೆಯ ನೆಮ್ಮದಿ ಕೆಡಿಸುತ್ತಾನೆ. ಆತನ ಉಪಸ್ಥಿತಿಯು ಉಳಿದವರಿಗೆ ಇರಿಸುಮುರಿಸು ತರುತ್ತದೆ. ಎಲ್ಲರೊಂದಿಗೆ ಬೆರೆತು ಬಾಳುವ, ಹರುಷ ಹಂಚುವ ಪ್ರೇಮಮಯ ಮನಸ್ಸುಗಳ ಜನರು ಸಂಸಾರದ ಸಾಮರಸ್ಯಕ್ಕೆ, ಐಕ್ಯತೆಗೆ ಕಾರಣರಾಗುತ್ತಾರೆ. ಇದಕ್ಕೆ ಮಲ್ಲಿಗೆಯಂತಹ ಶುಭ್ರ ಮನಸ್ಸು ಬೇಕು, ಭೇದಭಾವವಿಲ್ಲದೆ ಎಲ್ಲರೊಡನೆಯೂ ಒಡನಾಡುವ ಸರಳತೆಯೂ ಇರಬೇಕು.

ಶತಮಾನಗಳಿಂದ ಸ್ಥಿರವಾಗಿ ಉಳಿದಿರುವ ಕಪ್ಪು ಬಂಡೆಯು ಎಂತಹ ಬಿರುಮಳೆಗೂ ಒಂದಿನಿತೂ ಅಲುಗಾಡದು. ಎಷ್ಟು ಮಳೆ ಸುರಿದರೂ, ಬುಡದಲ್ಲೇ ನೀರು ನಿಂತಿದ್ದರೂ ಹನಿ ನೀರನ್ನೂ ಹೆಬ್ಬಂಡೆಯು ಒಳಗಿಸಿಕೊಳ್ಳದು. ಮನುಷ್ಯ ಬದುಕಿನಲ್ಲೂ ವಿಧಿಯು ಅನೇಕ ಸಂಕಷ್ಟಗಳನ್ನು ಮಳೆಯಂತೆ ಸುರಿಸುತ್ತಾನೆ. ದುಗುಡ, ಹತಾಶೆಗೆ ಒಳಗಾಗಿ ಬದುಕು ಹದಗೆಟ್ಟು ಹೋಗುವುದು, ಮನಸ್ಸು ಮರುಗುವುದು, ಜೀವನವೇ ಬೇಡವೆಂದು ಸಾವಿನತ್ತ ಮುಖ ಮಾಡುವುದೂ ಇದೆ. ಅಮೂಲ್ಯ ಜೀವನವನ್ನು ಪಡೆದಿರುವ ನಾವು ಏನೇ ಬಂದರೂ ಎದುರಿಸುವ ಸ್ಥೈರ್ಯವನ್ನು ರೂಢಿಸಿಕೊಳ್ಳಬೇಕು. ಎಲ್ಲವೂ ಬದಲಾಗುತ್ತದೆ, ಯಾವ ಸಂದರ್ಭವೂ ಹಾಗೆಯೇ ಉಳಿಯುವುದಿಲ್ಲ. ನಮ್ಮ ಮನಸ್ಸಿನ ಧೈರ್ಯವು ಅಸ್ಥಿರವಾಗದಂತೆ ಕಾಪಾಡಿಕೊಳ್ಳುವ ಆತ್ಮ ಬಲವು ನಮಗೆ ಸಿದ್ಧಿಯಾಗಬೇಕು.

**ಸಹಾಯವನ್ನು, ಸಾಂತ್ವನವನ್ನೂ ಬೇಡಿ ಬಂದ ದೀನರೊಂದಿಗೆ ಸಹಾನುಭೂತಿಯಿಂದ ನಡೆದುಕೊಳ್ಳುವುದರ ಜೊತೆಗೆ ದೈಹಿಕವಾಗಿ, ಮಾನಸಿಕವಾಗಿ ಅಶಕ್ತರಾದಂತಹ ಜೀವಗಳಿಗೆ ಕರುಣೆಯನ್ನು ತೋರಬೇಕು. ಬದುಕಿನಲ್ಲಿ ಕಹಿಯನ್ನೇ ಉಣ್ಣುತ್ತಿರುವ ನೊಂದ ಜೀವಗಳನ್ನು ಘಾಸಿಗೊಳಿಸದೆ, ಸಂತೈಸುವ, ಧೈರ್ಯ ತುಂಬುವ ಮಾನವೀಯತೆ ನಮ್ಮೊಳಗೆ ಜಾಗೃತವಾಗಬೇಕು.**

**(ಡಿ.ವಿ.ಗುಂಡಪ್ಪ)**

# ಲೆಕ್ಕ ಪರಿಶೋಧಕರಿಗಿತ್ತ ಆಶ್ವಾಸನೆಗಳ ಕುರಿತು
# ಉನ್ನತ ಮಟ್ಟದ ಪುನರ್ವಿಮರ್ಶಾ ಸಭೆ ಮತ್ತು
# ಉತ್ತಮ ಕಾರ್ಯ ನಿರ್ವಹಣೆಗಾಗಿ ಪ್ರಶಸ್ತಿ ಪ್ರಧಾನ ಸಮಾರಂಭ













## ಸಂಪಾದಕ ಮಂಡಳಿ


| | |
|---|---|
| **ಶ್ರೀ ಎಂ.ಬಿ.ರಾಜೇಶ್‌ಗೌಡ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್.ಸಿ.ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಹೆಚ್. ಶ್ರೀರಾಮೇಗೌಡ,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಸೋಮಶೇಖರ್ ಬಿ.ಆರ್.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಎಸ್.ಆರ್.ರಾಜನಾಯಕ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**

ಇ-ಮೇಲ್ ವಿಳಾಸ : gmcr@bescom.co.in

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಸಂದೇಶ ಕಳುಹಿಸಿ 58888 ವೆಬ್‌ಸೈಟ್.**